ಕೇಂದ್ರವನ್ನು ದ್ವೇಷಿಸುವ ಪ್ರಶ್ನೆ ಏಳುವುದಿಲ್ಲ. ಇದನ್ನು ಸಾಧ್ಯವಾಗಿಸುವಲ್ಲಿ ರಾಜ್ಯ ಸರ್ಕಾರಗಳ ಹೊಣೆ ಇರುತ್ತದೆ. ಕರ್ನಾಟಕ ಈ ದಿಕ್ಕಿನಲ್ಲಿ ತನ್ನ ಹೊಣೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿಲ್ಲ. ಆದ್ದರಿಂದ ಕೇಂದ್ರದ ಆಡಳಿತದಲ್ಲಿ ಕನ್ನಡಕ್ಕೆ ನ್ಯಾಯವಾಗಿ ದೊರೆಯಬೇಕಾದ ಸ್ಥಾನ ಲಭಿಸುತ್ತಿಲ್ಲ. ಪ್ರತಿಯೊಂದು ಕೇಂದ್ರದ ಕಚೇರಿಯೂ ಹಿಂದೀ ವಸಾಹತಗಳಾಗುತ್ತಿರುವುದನ್ನು ನೋಡುತ್ತಿದ್ದೇವೆ. ಇದು ಕೇಂದ್ರ ರಾಜ್ಯವನ್ನು ಅಪಮಾನಗೊಳಿಸುತ್ತಿರುವ ಒಂದು ರೀತಿ. ಕನ್ನಡದಲ್ಲಿ ಬರೆಯುವ ಚೆಕ್ಕುಗಳನ್ನು, ಅದೂ ಸರ್ಕಾರದ ಚೆಕ್ಕುಗಳನ್ನು, ತಾನು ಸ್ವೀಕರಿಸುವುದಿಲ್ಲವೆಂದು ರಿಸರ್ವ್‌ಬ್ಯಾಂಕ್ ಹೇಳುವುದಾದರೆ ರಾಜ್ಯ ಸರ್ಕಾರ ಕನ್ನಡದ ಪ್ರತಿಷ್ಠೆಯನ್ನು ಹೇಗೆ ಉಳಿಸುತ್ತದೆ? ತನ್ನ ರಾಜ್ಯ ಭಾಷೆಯನ್ನಾಗಿ ಕನ್ನಡವನ್ನು ಹೇಗೆ ಬಳಸುತ್ತದೆ? ಇಂಥ ನೂರಾರು ಸಮಸ್ಯೆಗಳಿಗೆ ಸಂಬಂಧಿಸಿದಂತೆ ಕೇಂದ್ರಕ್ಕೆ ಎದುರು ನಿಲ್ಲಲು ಅಥವಾ ಅದರ ಮನ ಒಲಿಸಲು ರಾಜ್ಯಕ್ಕೆ ಸಾಧ್ಯವಾಗಿಲ್ಲ.

## ಕನ್ನಡ ಗೌಣ

ಕೇಂದ್ರ ಸರ್ಕಾರ ಕರ್ನಾಟಕದಲ್ಲಿ ನಡೆದುಕೊಳ್ಳುವ ರೀತಿ ಇದಾದರೆ, ರಾಜ್ಯ ಸರ್ಕಾರವೇ ಕನ್ನಡದ ವಿಷಯದಲ್ಲಿ ಹೇಗೆ ನಡೆದುಕೊಳ್ಳುತ್ತದೆ ಎಂಬುದೂ ವಿಶೇಷ ಪರಿಶೀಲನೆಗೆ ಅರ್ಹವಾಗಿದೆ. ರಾಜ್ಯ ಸರ್ಕಾರ ತನ್ನ ಭಾಷೆಯನ್ನು ಶಿಕ್ಷಣದಲ್ಲಿ ಆಡಳಿತದಲ್ಲಿ ಹೇಗೆ ಬಳಸುತ್ತದೆ ಎನ್ನುವುದು ತುಂಬ ಮುಖ್ಯವಾದ ವಿಚಾರ. ಈ ಎರಡೂ ಕ್ಷೇತ್ರಗಳಲ್ಲಿ ಭಾಷೆಗೆ ದೊರೆಯುವ ಸ್ಥಾನದ ಮೇಲೆ ಅದರ ಘನತೆ ಪ್ರತಿಷ್ಠೆಗಳು ನಿಂತಿರುತ್ತವೆ. ಭಾಷೆಯಿಂದ ಜನರಿಗೆ ದೊರಕುವ ಪರಮ ಪ್ರಯೋಜನಗಳಾದರೂ ಈ ಕ್ಷೇತ್ರಗಳ ಮೂಲಕವಾಗಿಯೆ ದೊರಕಬೇಕು. ಕನ್ನಡದ ಮೂಲಕ ಶಿಕ್ಷಣ, ಕನ್ನಡದಲ್ಲಿ ಆಡಳಿತ– ಎರಡೂ ತುಂಬ ಮುಖ್ಯವಾದ ಸಂಗತಿಗಳು. ಆದರೆ ಎರಡರಲ್ಲಿಯೂ ಕನ್ನಡ ಗೌಣವಾಗಿರುವುದು ದುರ್ದೈವದ ಮಾತು.

**‘ಕರ್ನಾಟಕದ ಅವಿಭಾಜ್ಯವಾದ ಬೆಳಗಾವಿ ಅತ್ಯಂತ ವಾದಗ್ರಸ್ತವಾದ ಪ್ರದೇಶವಾಗಿದೆ. ಇದು ಕೇವಲ ಕೀಟಲೆ ರಾಜಕಾರಣದ ಫಲ... ಕನ್ನಡಿಗರ ದೌರ್ಬಲ್ಯ, ಮರಾಟಿಗರ ದಬ್ಬಾಳಿಕೆಗಳಿಂದ ಅದಿನ್ನೂ ತುಂಬ ಜೀವಂತವಾಗಿದೆ’**

ಶಿಕ್ಷಣದಲ್ಲಿ ಭಾಷೆಯ ಸ್ಥಾನ ಬಹಳದೊಡ್ಡದು. ಗ್ರಹಿಕೆ ಭಾಷೆಯ ಮೂಲಕ. ಶಿಕ್ಷಣದಲ್ಲಿ ವಿಷಯ ಗ್ರಹಣ ಪ್ರಧಾನವಾದದ್ದು. ಅದು ಯಾವ ಭಾಷೆಯ ಮೂಲಕ ಎನ್ನುವುದು ಮಹತ್ವದ ಪ್ರಶ್ನೆ. ಆದರೆ ನಮ್ಮಲ್ಲಿ ಬಹಳ ಜನರಿಗೆ, ಶಿಕ್ಷಣ ತಜ್ಞರಿಗೆ, ವಿಶ್ವವಿದ್ಯಾನಿಲಯದ ಕುಲಪತಿಗಳಾದವರಿಗೆ ಸಹ ಶಿಕ್ಷಣದಲ್ಲಿ ಭಾಷೆಯ ಸ್ಥಾನದ ಪೂರ್ಣ ಕಲ್ಪನೆ ಇರುವುದಿಲ್ಲ. ಭಾಷೆಯನ್ನು ಕಲಿಯುವುದು ಬೇರೆ; ಭಾಷೆಯ ಮೂಲಕ ಕಲಿಯುವುದು ಬೇರೆ. ಕನ್ನಡ ಮಾಧ್ಯಮ ಬೇಕು ಎಂದರೆ ಬೇರೆ ಭಾಷೆಗಳನ್ನು ಕಲಿಯಬಾರದು ಎಂದಲ್ಲ. ಎಷ್ಟೆಷ್ಟು ಭಾಷೆಗಳನ್ನು ಕಲಿಯುತ್ತೇವೋ ಅಷ್ಟಷ್ಟು ಹೆಚ್ಚಿನ ಪ್ರಯೋಜನ ಇರುತ್ತದೆ. ಆದರೆ ಯಾರಿಗೆ ಎಷ್ಟು ಭಾಷೆ ಬೇಕು ಎಂಬುದನ್ನು ಅವರವರೇ ನಿರ್ಧರಿಸಿಕೊಳ್ಳಬೇಕು. ಮಾಧ್ಯಮ ಮಾತ್ರ